ದಕ್ಷಿಣ ಕನ್ನಡ ಜಿಲ್ಲೆಯ ಸುನೈಫ್ ಉದ್ಯೋಗ ನಿಮಿತ್ತ ಕೇರಳದಲ್ಲಿದ್ದಾರೆ. ಅವರು ಕಾವ್ಯಪ್ರೇಮಿ. ಮಲಯಾಳಂ ಕಥೆ–ಕವಿತೆಗಳನ್ನು ಕನ್ನಡಕ್ಕೆ ತರುವ ಮೂಲಕ ಎರಡು ಭಾಷೆಗಳ ನಡುವಣ ಹೊಸ ಕೊಂಡಿಯಂತಿದ್ದಾರೆ. 'ತಾಜಮಹಲಿನ ಖೈದಿಗಳು' (ಶಿಹಾಬುದ್ದೀನ್ ಕಥೆಗಳು) ಹಾಗೂ 'ಭೂಮಿಯ ಹಕ್ಕುದಾರರು' (ವೈಕಂ ಬಷೀರ್ ಕಥೆಗಳು) ಸುನೈಫ್‌ರ ಅನುವಾದಿತ ಕೃತಿಗಳು.

ಸ್ಟೇಷನ್ ಬಿಟ್ಟು ಹೊರಹೋಗಲು ಸಾಧ್ಯವೇ ಇಲ್ಲವೇ? ಆತನ ಅಂತರಾತ್ಮವನ್ನು ನಡುಗಿಸುತ್ತಾ ಇದ್ದಕ್ಕಿದ್ದಂತೆ ರೈಲುಗಾಡಿಯೊಂದು ಅತಿ ವೇಗವಾಗಿ ನುಗ್ಗಿ ಬಂತು. ಆತ ಮಿಂಚಿನ ವೇಗದಲ್ಲಿ ಸ್ಟೇಷನ್ ಒಳಗೋಡಿ ಬಾವುಟ ಎತ್ತಿ ಬೀಸಿದ. ನಾನೆಂಬುದು ಕರ್ತವ್ಯ ನಿರ್ವಹಿಸಿದ ಸಂತೃಪ್ತಿ ಮಾತ್ರವೇ? ಅಥವಾ ನಿರರ್ಥಕತೆಯ ಮನುಷ್ಯರೂಪವೇ? ಪ್ರತಿ ಸಲ ರೈಲುಗಾಡಿ ಹಾದು ಹೋದ ನಂತರ ಈ ಯೋಚನೆ ಗಂಟೆಗಳ ಕಾಲ ಆತನನ್ನು ಬೇಟೆಯಾಡುತ್ತಿತ್ತು.

ಯೋಚನೆಯ ಕೊನೆಗೆ ಆತ ಮೇಲಧಿಕಾರಿಗಳಿಗೆ ಕಾಗದ ಬರೆದ. ನೋವು ಮತ್ತು ಮಾನಸಿಕ ತೊಳಲಾಟದಿಂದ ಆತ ಅರ್ಜಿಯಲ್ಲಿ ಪಾಲಿಸಬೇಕಾದ ಸರಕಾರಿ ಭಾಷೆಯನ್ನೇ ಮರೆತು ಬಿಟ್ಟ. ಅದು ದಯನೀಯವಾದ ವಿಲಾಪ ಕಾವ್ಯವಾಗದಿರಲು ಆತ ಬಹಳಷ್ಟು ತಾಳ್ಮೆ ವಹಿಸುತ್ತಿದ್ದ.

ಅರ್ಜಿಯಲ್ಲಿ ಒಮ್ಮೆ ಆತ ಹೀಗೆ ಬರೆದ:

ಈ ದಾರಿಯಲ್ಲಿ ಟೆಲಿಫೋನ್ ತಂತಿಗಳು ಯಾಕಾಗಿ ಹಾದುಹೋಗುತ್ತವೆ ಸರ್? ಒಮ್ಮೆಯೂ ಜನರೊಂದಿಗೆ ಮಾತನಾಡಲು, ಸುಖದುಃಖ ಕೇಳಿಸಿಕೊಳ್ಳಲು ಬಾರದದು? ದೊರೆ ಇದನ್ನಿಲ್ಲಿ ತಂದು ಬಿಗಿದು ಹೋಗಿದ್ದಾನೇನೋ?

ಸ್ಟೇಷನ್ ಪರಿಸರ ಬಿಟ್ಟು ದೂರ ಹೋಗಲು ಒಮ್ಮೆಯೂ ಆತನಿಗೆ ಧೈರ್ಯ ಬಂದಿರಲಿಲ್ಲ. ಒಮ್ಮೆಯೂ ಎಂದು ಹೇಳುವ ಹಾಗಿಲ್ಲ. ಒಂದೇ ಒಂದು ಸಲ ಆತ ಅದನ್ನು ಮಾಡಿದ್ದ. ಒಂದು ಕಿವಿಯನ್ನು ರೈಲುಗಾಡಿಯ ಗರ್ಜನೆಗೆ ಮೀಸಲಿಟ್ಟು ಅತಿ ಜಾಗರೂಕತೆಯಿಂದ ಆತ ಸ್ವಲ್ಪದೂರ ನಡೆದ. ಚಂದಕ್ಕೆ ಮಂಜು ಸುರಿಯುತ್ತಿದ್ದ ಒಂದು ಮುಂಜಾನೆಯದು.

ದಾರಿ ಪಕ್ಕದಲ್ಲಿ ಪಿಶಾಚಿಯಂತೆ ಟೆಲಿಫೋನ್ ಕಂಬಗಳು. ಹಕ್ಕಿಗಳು ಅದೇನೋ ಕಂಡು ಭಯಗೊಂಡವರಂತೆ ಒಂಟಿಮರ ಬಿಟ್ಟು ಹಾರಿ ಹೋದವು. ಸ್ಟೇಷನ್ ಬಿಟ್ಟು ಆಚೆಗೆ ನಡೆಯುವ ಪ್ರತಿ ಹೆಜ್ಜೆಯೂ ಆತನಿಗೆ ಪೂರ್ತಿ ಬೇಜವಾಬ್ದಾರಿತನವಾಗಿ ಅನಿಸಿತು. ಕರ್ತವ್ಯ ಮತ್ತು ಅಧಿಕಾರ ಒಟ್ಟಾಗಿ ಅಸಹಾಯಕವೂ ಅತಿ ಕಠಿಣವೂ ಆದ ಪಾಪಪ್ರಜ್ಞೆ ಆತನ ಹೃದಯ ಬಡಿತವನ್ನು ಏರಿಸುತ್ತಾ ಬಂದಿತು. ಕಣ್ಣಿಗೆ ನಿಲುಕದ ದೂರದಲ್ಲಿ ಮಂಜು ಮುಸುಕಿತ್ತು. ಉದ್ದಕ್ಕೆ ಹರಿದು ಹೋಗುತ್ತಿರುವ ಹಳಿಗಳಿಂದ ಶಬ್ದದ ಸಣ್ಣ ಕಿಡಿಯೊಂದು ಭೂಮಿಗೆ ಬಿತ್ತಾ? ರೈಲುಗಾಡಿ ಬರುತ್ತಿದೆಯಾ? ಭಗವಂತಾ, ಅನಾಥವಾಗಿರುವ ನನ್ನ ಸ್ಟೇಷನ್... ಆತ ಹೆದರಿ ಕಂಗಾಲಾಗಿ ತಿರುಗಿ ಓಡಿದ. ಬಾವುಟ ಹಿಡಿದು ಬೀಸಲು ತಯಾರಾಗಿ ನಿಂತ.

ಶಾಪಾಟ್ಟೆ ಹಲವು ಸಲ ಬಂದ. ಆತ ಪಿಶಾಚಿಯ ರೂಪವನ್ನು ಕಳಚಿರಲಿಲ್ಲ. ಒಂಟಿತನದಿಂದ ಪಾರಾಗಲು ಆತ ತನ್ನ ವಿಶ್ರಾಂತಿಕೋಣೆಯಲ್ಲಿ ನಿಲುಗನ್ನಡಿ ಮತ್ತು ಆಡಂಬರ ವಸ್ತುಗಳನ್ನು ಪೇರಿಸಿಟ್ಟ. ಜನರೆಲ್ಲ ಗುಂಪುಗೂಡಿ ನಿಂತಿರುವ ಒಂದು ಪಟವನ್ನೂ ಗೋಡೆಗೆ ಅಂಟಿಸಿದ. ಒಬ್ಬಂಟಿತನದಿಂದ ಬಚಾವಾಗಲು ಪ್ರಯತ್ನಿಸಿದ.

ಮೊದಮೊದಲಿಗೆ ತೀರ ಏಕಾಂಗಿಯೆಂದು ಅನಿಸಿದಾಗ ಕನ್ನಡಿಯ ಎದುರು ಸುಮಾರು ಹೊತ್ತು ತನ್ನನ್ನೇ ನೋಡುತ್ತಾ ನಿಲ್ಲುತ್ತಿದ್ದ. ಕೆಲವೊಮ್ಮೆ ಬೇರೆ ಯಾರೂ ಗಮನಿಸುತ್ತಿಲ್ಲವೆಂದು ಹಲವು ತರದ ಚೇಷ್ಟೆಗಳನ್ನೂ ಮಾಡಿದ. ಅದೂ ಬೋರು ಹೊಡೆಸಲು ಶುರುವಾದಾಗ ಕನ್ನಡಿಯ ಎದುರು ನಿಂತು ನೃತ್ಯ ಮಾಡಿದ. ನರ್ತಕ ಬೇರೆ ಯಾರೋ ಎಂದೂ ತಾನು ನೋಡುಗನೆಂದೂ ಭಾವಿಸುತ್ತಾ ನರ್ತಿಸಿದ.

ಕ್ರಮೇಣ ಅದೂ ಕೂಡ ಅಸಂಬದ್ಧವಾಗಿ ತೋರಿ ಅದರಲ್ಲೂ ಆಸಕ್ತಿ ಕುಂದಿತು.

ಬಹಳ ಬೇಗನೇ ತನ್ನಲ್ಲಿದ್ದ ಸೌಂದರ್ಯವರ್ಧಕಗಳನ್ನೂ ಅಲಂಕಾರಿಕ ವಸ್ತುಗಳನ್ನೂ ಎತ್ತಿ ಬಿಸಾಡಿದ. ಎಲ್ಲ ಭೋಗವಸ್ತುಗಳಲ್ಲೂ ಆತ ಶವಸಾನ್ನಿಧ್ಯ ಅನುಭವಿಸಿದ. ಮತ್ತೆ ಆ ಪುರಾತನಗಂಧದ ಆ ರೈಲ್ವೇ ಸ್ಟೇಷನ್ನೂ ರೈಲುಗಾಡಿಗಾಗಿ ಕಾಯುವುದೂ